ಆಯುಕ್ತರು
ಕಾರ್ಮಿಕ ಇಲಾಖೆ

ಕರ್ನಾಟಕ ಸರ್ಕಾರ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ಕಛೇರಿ:080 2975 3078
ಇಮೇಲ್ : labour.commissioner42@gmail.com

**ಸಂಖ್ಯೆ:** ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್-05/ಸಿಆರ್-35/2024-25 **ದಿನಾಂಕ:** 29 /03/2025

## : ಕಛೇರಿ ಜ್ಞಾಪನಾ :

**ವಿಷಯ:** ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಜಿಲ್ಲೆಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು.

**ಉಲ್ಲೇಖ:**
1. ಈ ಕಛೇರಿಯ ಪತ್ರ ಸಂಖ್ಯೆ:ಜಂಕಾಆ/ಸಿಎಎಲ್/ಸಿಆರ್-16/2017-18, ದಿನಾಂಕ:17/08/2017.
2. ಸರ್ಕಾರದ ಆದೇಶ ಸಂಖ್ಯೆ: LD 86 CLC 2012, Bangalore, ದಿನಾಂಕ: 20/10/2012.
3. ಈ ಕಛೇರಿ ಸುತ್ತೋಲೆ ಸಂಖ್ಯೆ:ಕೆಎಸ್‌ಸಿಎಲ್‌ಇಪಿಎಸ್/ಸಿಆರ್-90/2020-21, ದಿನಾಂಕ:16/03/2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕದಲ್ಲಿ ಬಾಲಕಾರ್ಮಿಕ ಪುನರ್ವಸತಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಕರ್ನಾಟಕವನ್ನು ಬಾಲ ಹಾಗೂ ಕಿಶೋರ ಕಾರ್ಮಿಕ ಮುಕ್ತ ರಾಜ್ಯವನ್ನಾಗಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ಈಗಾಗಲೇ ಸುತ್ತೋಲೆ, ಅಧಿಸೂಚನೆ ಹಾಗೂ ಕಛೇರಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ. ಆದರೆ ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನ ಮಾಡದೇ ಇರುವುದು ಕಂಡುಬಂದಿರುತ್ತದೆ ಹಾಗೂ ದಿನಾಂಕ:10/03/2025ರಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ(ಎನ್.ಸಿ.ಪಿ.ಸಿ.ಆರ್) ಇವರು ನಡೆಸಿರುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೆಲವು ಜಿಲ್ಲೆಗಳಲ್ಲಿ ನಿರ್ದೇಶನಗಳನ್ನು ಪಾಲಿಸದೇ ಇರುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಾಗಾಗಿ ಇತ್ತೀಚಿನ ಬೆಳವಣಿಗೆಗಳನ್ನೊಳಗೊಂಡಂತೆ ಮತ್ತೊಮ್ಮೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದ್ದು, ಅವುಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ಈ ಮೂಲಕ ಸೂಚಿಸಿದೆ.

### I) ತಪಾಸಣೆಗಳು:-

1. ಉಲ್ಲೇಖ(1)ರಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರ ಕಲಂ 16 ಹಾಗೂ 17ರಡಿಯಲ್ಲಿ ನಿರೀಕ್ಷಕರಾಗಿ ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ ಪ್ರತಿಯೊಂದು ತಂಡವೂ ಮಾಸಿಕ ಕನಿಷ್ಠ 15 ತಪಾಸಣೆಗಳನ್ನು ಕೈಗೊಳ್ಳಲು ನಿರ್ದೇಶನ ನೀಡಲಾಗಿದ್ದು, ಅದರನ್ವಯ ಕ್ರಮ ವಹಿಸುವುದು ಹಾಗೂ ವರದಿಯನ್ನು ಸಲ್ಲಿಸುವುದು.
2. ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಂಬಂಧ ಸರ್ಕಾರದ ಆದೇಶದನ್ವಯ ರಚಿಸಲಾದ ಸರ್ಕಾರದ ಆದೇಶ ಸಂಖ್ಯೆ:ಕಾಇ 12 ಸಿಎಲ್‌ಸಿ 2023, ಬೆಂಗಳೂರು ದಿನಾಂಕ:20/09/2023ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಮಟ್ಟದ ಕಾರ್ಯಪಡೆ(Task Force) ಹಾಗೂ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ರಚಿಸಲಾದ ತಾಲ್ಲೂಕು ಮಟ್ಟದ ಕಾರ್ಯಪಡೆ(Task Force)ಗಳನ್ವಯ ಕನಿಷ್ಠ ಮಾಸಿಕ ತಪಾಸಣೆಗಳನ್ನು ನಡೆಸಲು ಗುರಿ ನಿಗಧಿಪಡಿಸಿ ತಪಾಸಣೆಗಳನ್ನು ಮಾಡುವುದು.

3. ಬಾಲ ಹಾಗೂ ಕಿಶೋರ ಕಾರ್ಮಿಕರ ತಪಾಸಣೆಗಾಗಿ ಬಾಲ ಹಾಗೂ ಕಿಶೋರ ಕಾರ್ಮಿಕರ ಅನಿರೀಕ್ಷಿತ ತಪಾಸಣೆ ಹೋಗುವ ಸಂದರ್ಭದಲ್ಲಿ ಬಾಲ ಕಾರ್ಮಿಕ ಕಾಯ್ದೆಯಡಿ ಅಧಿಸೂಚಿಸಿದ 11 ಇಲಾಖೆಯ ಅಧಿಕಾರಿಯ ವಾಹನವನ್ನು ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದು Rotation Basis ಮೇಲೆ ಬಳಸಿಕೊಳ್ಳುವುದು. ಈ ಕುರಿತು ಈಗಾಗಲೇ ಈ ಕಛೇರಿಯ ಪತ್ರ ಸಂಖ್ಯೆ:ಕೆಎಸ್‌ಸಿಎಲ್‌ಇಪಿಎಸ್/ಸಿಎಲ್–04/ಸಿಆರ್–14/2024–25, ದಿನಾಂಕ:31/01/2025ರಲ್ಲಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.
4. ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರನ್ವಯ ತಪಾಸಣೆಗಳನ್ನು ಕೈಗೊಂಡು ಕಂಡುಬರುವ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪುನರ್ವಸತಿಗೊಳಿಸಿ ತಪ್ಪಿತಸ್ಥ ಮಾಲೀಕರ ವಿರುದ್ಧ ಸದರಿ ಕಾಯ್ದೆಯಡಿ ಅದೇ ಮಾಹೇಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲು ಕ್ರಮವಹಿಸುವುದು.

**II) ಬಾಲ ಹಾಗೂ ಕಿಶೋರ ಕಾರ್ಮಿಕರ ಪುನರ್ವಸತಿ ಕ್ರಮಗಳು:–**

1. ಬಾಲ ಹಾಗೂ ಕಿಶೋರ ಕಾರ್ಮಿಕರ ತಪಾಸಣೆ / ದಾಳಿಗಳನ್ನು ನಡೆಸಿ, ತಪಾಸಣೆಗಳಲ್ಲಿ / ದಾಳಿಗಳಲ್ಲಿ ಪತ್ತೆಯಾದ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಮಕ್ಕಳ ಕಲ್ಯಾಣ ಸಮಿತಿ (Child Welfare Committee) ಯ ಬಾಲಕರ ಮತ್ತು ಬಾಲಕಿಯರ ಬಾಲಮಂದಿರಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಿಗೆ, ಮುಖ್ಯವಾಹಿನಿ ಶಾಲೆಗಳಲ್ಲಿ ಮಕ್ಕಳ ಅರ್ಹತೆಗನುಗುಣವಾಗಿ ದಾಖಲು ಮಾಡಲು ಕ್ರಮ ಕೈಗೊಳ್ಳುವುದು.
2. ತಪಾಸಣೆ / ಸಮೀಕ್ಷೆ/ ಅನಿರೀಕ್ಷಿತ ದಾಳಿಗಳಲ್ಲಿ ಪತ್ತೆ ಹಚ್ಚಲಾದ ಬಾಲ ಕಾರ್ಮಿಕ ಮಕ್ಕಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ/ ಶ್ರೀಮತಿ ಇಂದಿರಾಗಾಂಧಿ/ ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಮತ್ತು ಶ್ರೀ ನಾರಾಯಣ ಗುರು ಶಾಲೆಗಳಿಗೆ ವಿಶೇಷ ವರ್ಗಗಳ ಅಭ್ಯರ್ಥಿಗಳನ್ನು ಪ್ರವೇಶ ಪರೀಕ್ಷೆ ಇಲ್ಲದೆ ನೇರವಾಗಿ ದಾಖಲಾತಿ ಮಾಡುವುದು. ಈ ಕುರಿತು ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ:ಕೆಎಸ್‌ಸಿಎಲ್‌ಇಪಿಎಸ್/ಸಿಎಲ್–07/ಸಿಆರ್–20/2024–25, ದಿನಾಂಕ:15/03/2025ರಲ್ಲಿ ನಿರ್ದೇಶನವನ್ನು ನೀಡಲಾಗಿರುತ್ತದೆ.

**III) ಸಭೆಗಳು:–**

1. ಸರ್ಕಾರದ ಉಲ್ಲೇಖ(2)ರ ಪತ್ರದನ್ವಯ 3 ತಿಂಗಳಿಗೊಮ್ಮೆ ಜಿಲ್ಲಾ ಮಟ್ಟದ ಸಲಹಾ ಸಮಿತಿ, 2 ತಿಂಗಳಿಗೊಮ್ಮೆ ಜಿಲ್ಲಾಮಟ್ಟದ ಕಾರ್ಯಕಾರಿ ಸಮಿತಿ, ಪ್ರತಿ ತಿಂಗಳು ತಾಲ್ಲೂಕು ಮಟ್ಟದ ಬಾಲಕಾರ್ಮಿಕ ನಿರ್ಮೂಲನೆ ಮತ್ತು ಪುನರ್ವಸತಿ ಸೊಸೈಟಿಯ ಸಮಿತಿಗಳ ಸಭೆಯನ್ನು ಸರ್ಕಾರದ ಆದೇಶ ಸಂಖ್ಯೆ:LD 86 CLC 2012, ದಿನಾಂಕ:20/10/2012ರನ್ವಯ ನಡೆಸುವುದು ಮತ್ತು ವರ್ಷಕ್ಕೆ ಒಂದು ಬಾರಿ ಸೊಸೈಟಿಯ ಸರ್ವ ಸದಸ್ಯರ ಸಭೆಯನ್ನು ಪ್ರತಿ ವರ್ಷ ನಡೆಸಲು ಕ್ರಮವಹಿಸುವುದು ಹಾಗೂ ನಡವಳಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

2. ಸರ್ಕಾರದ ಆದೇಶ ಸಂಖ್ಯೆ:ಕಾಇ 12 ಸಿಎಲ್‌ಸಿ 2023, ಬೆಂಗಳೂರು ದಿನಾಂಕ:20/09/2023ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಮಟ್ಟದ ಕಾರ್ಯಪಡೆ(Task Force) ಹಾಗೂ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ರಚಿಸಲಾದ ತಾಲ್ಲೂಕು ಮಟ್ಟದ ಕಾರ್ಯಪಡೆ(Task Force)ಗಳು ಪ್ರತಿ ತಿಂಗಳಿಗೊಮ್ಮೆ ಸಭೆಯನ್ನು ನಡೆಸುವುದು ಹಾಗೂ ಬಾಲ ಹಾಗೂ ಕಿಶೋರ ಕಾರ್ಮಿಕರ ಕನಿಷ್ಠ ಮಾಸಿಕ ತಪಾಸಣೆಗಳನ್ನು ನಡೆಸಲು ಗುರಿ ನಿಗಧಿಪಡಿಸಿ ಅದರಂತೆ ಕ್ರಮ ಕೈಗೊಳ್ಳುವುದು.
3. ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸ್ಯಟಿಯ ಸದಸ್ಯ ಕಾರ್ಯದರ್ಶಿಗಳು ಮೇಲ್ಕಂಡ ಅಂಶಗಳ ಕುರಿತು ವರ್ಷದ ಪ್ರಾರಂಭದಲ್ಲಿ ಮಾಸಿಕವಾರು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು.

**IV) ದೂರು ನಿರ್ವಹಣಾ ವ್ಯವಸ್ಥೆ:-**

1. ಉಚಿತ ಸಹಾಯವಾಣಿ: 1098, ಕಾರ್ಮಿಕ ಸಹಾಯವಾಣಿ:155214, ಪೊಲೀಸ್ ಸಹಾಯವಾಣಿ:112, ಕುರಿತು ಸಾರ್ವಜನಿಕರು ದೂರುಗಳನ್ನು ದಾಖಲಿಸಲು ಕ್ರಮವಹಿಸುವುದು.
2. ಬಾಲ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ)ಕಾಯ್ದೆ, 1986ರ ಕಲಂ 16 ಹಾಗೂ ಕಲಂ 17ರಡಿ ನೇಮಕಗೊಂಡ ಅಧಿಕಾರಿಗಳು/ನಿರೀಕ್ಷಕರುಗಳ ಕಛೇರಿಗೂ ಸಹ ದೂರುಗಳನ್ನು ನೀಡಲು ಕ್ರಮವಹಿಸುವುದು.
3. ಬಾಲ ಹಾಗೂ ಕಿಶೋರ ಕಾರ್ಮಿಕ ದೂರುಗಳನ್ನು ಕೇಂದ್ರ ಸರ್ಕಾರದ Pencil (Platform for effective enforcement for no Child Labour) Portal ಹಾಗೂ National Commisssion for Protection of Child Rights (N.C.P.C.R) ಇವರ portal, ಹಾಗೂ ಸಾಮಾಜಿಕ ಜಾಲತಾಣಗಳಾದ Twitter, Facebook ಹಾಗೂ Whatsapp ಮೂಲಕವು ಸ್ವೀಕರಿಸಿ, ಅನಿರೀಕ್ಷಿತ ದಾಳಿಗಳನ್ನು ನಡೆಸಿ, ಮಕ್ಕಳನ್ನು ರಕ್ಷಿಸಿ ಪುನರ್ವಸತಿಗೊಳಿಸಲು ನಿಯಮಾನುಸಾರ ಕ್ರಮವಹಿಸುವುದು.

**V) ತರಬೇತಿ ಕಾರ್ಯಕ್ರಮಗಳು:-**

1. ಬಾಲ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ)ಕಾಯ್ದೆ, 1986, ನಿಯಮಗಳು 2017(ಕೇಂದ್ರ/ರಾಜ್ಯ), ಎಸ್.ಓ.ಪಿ (ಕೇಂದ್ರ/ರಾಜ್ಯ) ಗಳ ಕುರಿತು ಬಾಲ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ)ಕಾಯ್ದೆ, 1986ರ ಕಲಂ16 ಹಾಗೂ 17 ರಡಿ ನೇಮಕಗೊಂಡ ಅಧಿಕಾರಿಗಳು/ನಿರೀಕ್ಷಕರುಗಳಿಗೆ ಹಾಗೂ ಸ್ತ್ರೀ ಶಕ್ತಿ ಸಂಘಗಳು/ಸ್ವ-ಸಹಾಯ ಗುಂಪುಗಳಿಗೆ/ಯುವ ಮಂಡಳಿಗಳಿಗೆ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು/ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು ಮತ್ತು ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತಿ ಸದಸ್ಯರಿಗೆ ಯೂಟ್ಯೂಬ್ ಲೈವ್/ ಜೂಮ್ ಆಪ್/ಗೂಗಲ್ ಮೀಟ್ ರಲ್ಲಿ ಸ್ಥಳಿಯವಾಗಿ ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳಿಂದ ಉಚಿತವಾಗಿ ಮೇ, ಜುಲೈ, ಅಕ್ಟೋಬರ್ ಹಾಗೂ ಜನವರಿ ತಿಂಗಳುಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಜಿಲ್ಲಾಡಳಿತದಿಂದ ಆಯೋಜಿಸಲು ಕ್ರಮ ವಹಿಸುವುದು.
2. ಈ ಕುರಿತು ಹೆಚ್ಚುವರಿ ತರಬೇತಿಗಳನ್ನು ನೀಡಲು ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆ ಮಾಡಿ ನಿರ್ದೇಶನವನ್ನು ನೀಡಲಾಗುವುದು.

**VI) ಗ್ರಾಮ ಪಂಚಾಯತಿ ಮಟ್ಟದ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕ್ರಮ:–**

1. ಈಗಾಗಲೇ ಗ್ರಾಮ ಪಂಚಾಯತಿ ಮಟ್ಟದಲ್ಲಿ ರಚಿಸಲಾದ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯಲ್ಲಿ ಹಾಗೂ ಮಕ್ಕಳ ಗ್ರಾಮ ಸಭೆಯಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ)ಕಾಯ್ದೆ, 1986, ನಿಯಮಗಳು 2017(ಕೇಂದ್ರ/ರಾಜ್ಯ), ಎಸ್.ಓ.ಪಿ (ಕೇಂದ್ರ/ರಾಜ್ಯ) ಗಳ ಅನುಷ್ಠಾನ ಕುರಿತು ಚರ್ಚೆ ಮತ್ತು ಅನುಷ್ಠಾನದ ಕುರಿತು ಜಿಲ್ಲಾಧಿಕಾರಿಗಳಿಂದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ನಿರ್ದೇಶನವನ್ನು ನೀಡುವುದು.

**VII) ಜನಜಾಗೃತಿ ಕಾರ್ಯಕ್ರಮಗಳು:–**

1. **ಪ್ರತಿ ವರ್ಷ ಜೂನ್ 12 ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಆಯೋಜನೆ ಮಾಡುವುದು:–** 1ನೇ ಜೂನ್ ರಿಂದ 30ನೇ ಜೂನ್‌ವರೆಗೆ ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣಾ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸುವುದು. ಈ ಕುರಿತು ಜಿಲ್ಲೆ/ ತಾಲ್ಲೂಕು/ ಹೋಬಳಿ/ಗ್ರಾಮ ಮುಖ್ಯದ ಎಲ್ಲಾ ಸರ್ಕಾರಿ ಇಲಾಖೆಗಳು/ ಕಛೇರಿಗಳು ಮತ್ತು ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದಿಲ್ಲವೆಂದು "ಪ್ರಮಾಣ ವಚನ" ಸ್ವೀಕರಿಸಿ ಕ್ರಮ ವಹಿಸುವುದು. ಸದರಿ ಕಾರ್ಯಕ್ರಮದಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ ಮುಕ್ತ ಕಾರ್ಮಿಕರಾಗಿದ್ದು, ಪ್ರಸ್ತುತ ಒಳ್ಳೆಯ ಕೆಲಸದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಬಾಲ ಹಾಗೂ ಕಿಶೋರ ಕಾರ್ಮಿಕ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಕರನ್ನು ಹೆಚ್ಚು ಮೊಕದ್ದಮೆಗಳನ್ನು ಹೂಡಿರುವ ಅಧಿಕಾರಿ/ ನಿರೀಕ್ಷಕರನ್ನು ಸನ್ಮಾನಿಸುವುದು.
2. ಜಿಲ್ಲಾಡಳಿತವು ಬಾಲ ಹಾಗೂ ಕಿಶೋರ ಕಾರ್ಮಿಕ ಮುಕ್ತ ಗ್ರಾಮಗಳನ್ನು ಗುರುತಿಸಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಹಾಗೂ ಪ್ರಮಾಣ ಪತ್ರವನ್ನು ನೀಡಿ ಗೌರವಿಸುವುದು.
3. ಬಾಲಕಾರ್ಮಿಕ ವಿರೋಧಿ ದಿನದ ಕುರಿತು ಪ್ರಾಥಮಿಕ/ಪ್ರೌಢಶಾಲಾ ಮಕ್ಕಳಿಗೆ/ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ/ಕಥಾ/ಭಾಷಣ/ಚರ್ಚಾಸ್ಪರ್ಧೆ/ಚಿತ್ರಕಲೆ/ರಸ ಪ್ರಶ್ನೆ ಕಾರ್ಯಕ್ರಮ ಮತ್ತು ಮಕ್ಕಳಿಂದ ನಾಟಕ ಪ್ರದರ್ಶನಗಳನ್ನು ಕೈಗೊಳ್ಳಲು ಕ್ರಮವಹಿಸುವುದು.
4. ನವೆಂಬರ್–14ರಂದು "ಮಕ್ಕಳ ದಿನಾಚರಣೆ"ಯ ಪ್ರಯುಕ್ತ ಬಾಲ ಹಾಗೂ ಕಿಶೋರ ಕಾರ್ಮಿಕ' ಪದ್ಧತಿ ನಿರ್ಮೂಲನೆ ವಿಷಯದ ಕುರಿತು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು ಹಾಗೂ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೆಚ್ಚಿನ ಅರಿವು ಮೂಡಿಸಲು ಕ್ರಮ ಕೈಗೊಳ್ಳುವುದು.
5. ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಕಛೇರಿ ಹೆಸರಿನಲ್ಲಿ Twitter, ಫೇಸ್ ಬುಕ್(Facebook) ಮತ್ತು ಇನ್ಸ್ಟಾಗ್ರಾಮ್(Instagram) ಖಾತೆಯನ್ನು ತರೆದು, ತಮ್ಮ ಕಛೇರಿಯಿಂದ ನಡೆಸಲಾಗುವ ಕಾರ್ಯಕ್ರಮಗಳು, ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣೆ ಮತ್ತು ಇನ್ನಿತರ ಕಾರ್ಯ ಚಟುವಟಿಕೆಗಳ ಛಾಯಾಚಿತ್ರಗಳು ಹಾಗೂ ವೀಡಿಯೋಗಳನ್ನು ತಪ್ಪದೇ ಅಪ್ಲೋಡ್ ಮಾಡಿ, ಮಾನ್ಯ ಕಾರ್ಮಿಕ ಸಚಿವರು, ಕಾರ್ಮಿಕ ಸಚಿವಾಲಯ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಕಛೇರಿಯ "ಫೇಸ್‌ಬುಕ್(Facebook):KSCLEPS ಮತ್ತು ಇನ್ಸ್ಟಾಗ್ರಾಮ್(Instagram):KSCLEPS" ಖಾತೆಗೆ Tag ಮತ್ತು Follow ಮಾಡಲು ಕ್ರಮವಹಿಸುವುದು.

6. ಈ ಕುರಿತು ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆ ಮಾಡಲಾಗುವುದು.
7. ಹೆಚ್ಚುವರಿ ಅರಿವು-ನೆರವು ಕಾರ್ಯಕ್ರಮ ಹಾಗೂ ಜನ-ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ಕೇಂದ್ರ ಕಛೇರಿಯಿಂದ ನಿರ್ದೇಶನವನ್ನು ನೀಡಲಾಗುವುದು.

**VIII) ಜನಪ್ರತಿನಿಧಿಗಳಿಗೆ ಮಾಹಿತಿ ಒದಗಿಸುವುದು:-**

1. ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರ;ಣ) ಕಾಯ್ದೆ 1986, ನಿಯಮಗಳು ಎಸ್.ಓ.ಪಿ (ಕೇಂದ್ರ / ರಾಜ್ಯ) 2017ರ ಅನುಷ್ಠಾನ ಕಾಯ್ದೆಯಲ್ಲಿನ ಕಾನೂನು ಕ್ರಮಗಳು, ಶಿಕ್ಷೆ ಪ್ರಮಾಣ, ಪುನರ್ವಸತಿ, ಪುನರ್ವಸತಿ ನಿಧಿ ಯೋಜನೆ, ರಾಜ್ಯ ಬಾಲಕಾರ್ಮಿಕ ಪದ್ಧತಿಯ ಪುನರ್ವಸತಿ ಯೋಜನೆ ಹಾಗೂ ಬಾಲ ಕಾರ್ಮಿಕರು ಕಂಡು ಬಂದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಹಾಗೂ ವಿಳಾಸಗಳನ್ನೊಳಗೊಂಡ ಸಂಪೂರ್ಣ ಮಾಹಿತಿಯನ್ನು ತಮ್ಮ ವ್ಯಾಪ್ತಿಗೆ ಬರುವ ಜನ ಪ್ರತಿನಿಧಿಗಳಿಗೆ ನೀಡಲು ಕ್ರಮ ವಹಿಸುವುದು.

**IX) ಜಿಲ್ಲಾ ಬಾಲ ಹಾಗೂ ಕಿಶೋರ ಕಾರ್ಮಿಕ ಪುನರ್ವಸತಿ ನಿಧಿ ಯೋಜನೆ:-**

1. "ಜಿಲ್ಲಾ ಬಾಲ ಹಾಗೂ ಕಿಶೋರಕಾರ್ಮಿಕ ಪುನರ್ವಸತಿ ನಿಧಿ ಯೋಜನೆ"ಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:LD 124 CLC 2016, ದಿನಾಂಕ:01/03/2019ರನ್ವಯ ಸ್ಥಾಪಿಸುವುದು ಹಾಗೂ ಈ ಕೆಳಕಂಡಂತೆ ಜಿಲ್ಲಾ ಬಾಲ ಹಾಗೂ ಕಿಶೋರಕಾರ್ಮಿಕ ಪುನರ್ವಸತಿ ನಿಧಿ ಯೋಜನೆಯನ್ನು ನಿರ್ವಹಿಸುವುದು
    - ಬ್ಯಾಂಕ್ ಖಾತೆಯ ಹೆಸರನ್ನು "ಜಿಲ್ಲಾ ಬಾಲ ಹಾಗೂ ಕಿಶೋರ ಕಾರ್ಮಿಕ ಪುನರ್ವಸತಿ ನಿಧಿ ಯೋಜನೆ" ಎಂದು ಮಾಡುವುದು.
    - ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆ ಹಚ್ಚಿ ತಪ್ಪಿತಸ್ಥ ಮಾಲೀಕರಿಂದ ರೂ.20,000/-ಗಳ ದಂಡವನ್ನು ವಸೂಲು ಮಾಡುವುದು.
    - ತಪ್ಪಿತಸ್ಥ ಮಾಲೀಕರಿಂದ ರೂ.20,000/-ಗಳ ದಂಡವನ್ನು ವಸೂಲಿ ಮಾಡಿ ಸರ್ಕಾರದಿಂದ ನೀಡುವ ವಂತಿಕೆ ರೂ.15,000/-ಗಳನ್ನು ಸೇರಿಸಿ ಬಾಲ ಹಾಗೂ ಕಿಶೊರ ಕಾರ್ಮಿಕರ ಹೆಸರಿನಲ್ಲಿ ಠೇವಣಿ ಮಾಡುವುದು.
    - ಬಾಲ ಹಾಗೂ ಕಿಶೋರ ಕಾರ್ಮಿಕರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಠೇವಣಿ ಮಾಡಿದ್ದು, ಬಾಲ ಹಾಗೂ ಕಿಶೋರ ಕಾರ್ಮಿಕರಿಗೆ 18 ವರ್ಷ ತುಂಬಿದ ನಂತರ 03 ತಿಂಗಳ ಅವಧಿಯ ಒಳಗಾಗಿ ಬಾಲ ಹಾಗೂ ಕಿಶೋರ ಕಾರ್ಮಿಕರಿಗೆ ಠೇವಣಿ ಹಾಗೂ ಬಡ್ಡಿಯ ಒಟ್ಟು ಮೊತ್ತವನ್ನು ನೀಡುವುದು.
2. ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ಹೂಡಿರುವ ಮೊಕದ್ದಮೆಗಳಿಗೆ ಮಾನ್ಯ ಘನ ನ್ಯಾಯಾಲಯವು ವಿಧಿಸುವ ದಂಡದ ಮೊತ್ತವನ್ನು ಕಾರ್ಮಿಕ ಇಲಾಖೆಯ ವತಿಯಿಂದ ನಿರ್ವಹಿಸುವ "ಜಿಲ್ಲಾ ಬಾಲ ಹಾಗೂ ಕಿಶೋರ ಕಾರ್ಮಿಕ ಪುನರ್ವಸತಿ ನಿಧಿ ಯೋಜನೆ"ಗೆ ಜಮಾ ಮಾಡಲು ಕ್ರಮ ವಹಿಸುವುದು. ಈ ಕುರಿತು ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ:ಕೆಎಸ್‌ಸಿಎಲ್‌ಇಪಿಎಸ್/ಸಿಎಲ್-05/ಸಿಆರ್-32/2023-24, ದಿನಾಂಕ:27/09/2023ರಲ್ಲಿ ನಿರ್ದೇಶನವನ್ನು ನೀಡಲಾಗಿರುತ್ತದೆ.

**X) ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಕಾರ್ಯಕ್ರಮಗಳು:–**

1. ಬಾಲಕಾರ್ಮಿಕ ಪುನರ್ವಸತಿ ಯೋಜನೆಯ ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಎಸ್.ಪಿ) ಹಾಗೂ ಗಿರಿಜನ ಉಪಯೋಜನೆ (ಟಿ.ಎಸ್.ಪಿ) ಲೆಕ್ಕಶಿರ್ಷಿಕೆಯಡಿ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡಂತೆ ಬಳಕೆ ಮಾಡುವುದು;
    - ಎಸ್.ಸಿ/ಎಸ್.ಟಿ ಜನಾಂಗದ ಬಾಲ ಹಾಗೂ ಕಿಶೋರ ಕಾರ್ಮಿಕರಿಗೆ ಆಹಾರ ಧಾನ್ಯ, ಸಮವಸ್ತ್ರ, ನೋಟ್ ಪುಸ್ತಕ, ಲೇಖನ ಸಾಮಗ್ರಿಗಳನ್ನು ಹಾಗೂ ಇನ್ನಿತರೆ ವಸ್ತುಗಳನ್ನು ಕಿಟ್ ರೂಪದಲ್ಲಿ ಸರಬರಾಜು ಮಾಡುವುದು.
    - ಎಸ್.ಸಿ/ಎಸ್.ಟಿ ಜನಾಂಗದ ಪ್ರದೇಶಗಳಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಬಗ್ಗೆ ಮಾಹಿತಿ, ಶಿಕ್ಷಣ ಹಾಗೂ ಸಂವಹನ(I.E.C) ಚಟುವಟಿಕೆಗಳ ಮೂಲಕ ಜನಜಾಗೃತಿಯನ್ನು ಮೂಡಿಸುವುದು.
    - ಜಿಲ್ಲೆಗಳಲ್ಲಿ ಹಿಂದಿನ ವರ್ಷಗಳಲ್ಲಿ ಉಳಿಕೆಯಾದ ಅನುದಾನವನ್ನು ಮಾಹಿತಿ, ಶಿಕ್ಷಣ ಹಾಗೂ ಸಂವಹನ(I.E.C) ಚಟುವಟಿಕೆಗಳಿಗೆ ಬಳಕೆ ಮಾಡುವುದು.
2. ಮೇಲ್ಕಂಡಂತೆ ಈ ಕಛೇರಿಯ ಜ್ಞಾಪನಾ ಪತ್ರ ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್–02/ಸಿಆರ್–16/2024–25, ದಿನಾಂಕ: 18.09.2024 ರನ್ವಯ ಅನುದಾನವನ್ನು ಬಳಕೆ ಮಾಡುವುದು ಹಾಗೂ ವರದಿಯನ್ನು ಪ್ರತಿ ತಿಂಗಳು ಸಲ್ಲಿಸುವುದು.

**XI) ನೋಡಲ್ ಅಧಿಕಾರಿ ನೇಮಕ:–**

1. ರಾಜ್ಯ ಸರ್ಕಾರವು ಸರ್ಕಾರದ ಅಧಿಸೂಚನೆ ಸಂಖ್ಯೆ: LD 137 CLC 2017, ದಿನಾಂಕ: 25.09.2017 ರನ್ವಯ ಆಯಾ ಜಿಲ್ಲೆಯ ಕಾರ್ಮಿಕ ಅಧಿಕಾರಿಗಳು ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ನೋಡಲ್ ಅಧಿಕಾರಿಯಾಗಿರುತ್ತಾರೆ. ಅದರನ್ವಯ ಕಾರ್ಮಿಕ ಅಧಿಕಾರಿಗಳು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಮವಹಿಸುವುದು.

**XII) ಮಕ್ಕಳು ಬಾಲ ನಟ/ನಟಿಯಾಗಿ ನಟನಾ ಕೆಲಸ ಮಾಡಲು ಇರುವ ಕಾನೂನಾತ್ಮಕ ಮಾನದಂಡಗಳು:–**

1. ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಕರ್ನಾಟಕ ನಿಯಮಗಳು "2 ಸಿ" ರಲ್ಲಿ ಒಬ್ಬ ಕಲಾವಿದನಾದ ಕೆಲಸ ಮಾಡಬೇಕಾದ ಮಗು (1) ಕಲಂ 3ರನ್ವಯ ಮಗು ಒಬ್ಬ ಕಲಾವಿದನಾಗಿ ಮಾಡಬೇಕಾದ ಅಂಶಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಕ್ರಮ ವಹಿಸುವುದು. ಈಗಾಗಲೇ ಈ ಕಛೇರಿಯ ಸುತ್ತೋಲೆಯ ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಎಲ್–05/ಸಿಆರ್–40/2023–24, ದಿನಾಂಕ: 08.02.2024ರನ್ವಯ ಕ್ರಮ ವಹಿಸುವುದು.

**XIII) ಕಾಯ್ದೆ, ನಿಯಮಗಳು ಹಾಗೂ ಎಸ್.ಓ.ಪಿಗಳ ಅನುಷ್ಠಾನ:–**

1. ಬಾಲ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986, ನಿಯಮಗಳು–2017(ಕೇಂದ್ರ/ರಾಜ್ಯ) ಹಾಗೂ ಬಾಲ ಹಾಗೂ ಕಿಶೋರ ಕಾರ್ಮಿಕ ಮುಕ್ತ ಜಿಲ್ಲೆಗಳ ಘೋಷಣೆ ಹೊರಡಿಸಲು ಅವಶ್ಯವಿರುವ ಎಸ್.ಓ.ಪಿಗಳ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

2. ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ನಿಯಮಗಳು, 2017 2ಬಿ(2) ರನ್ವಯ ಶಾಲೆಯಲ್ಲಿ ಶಿಕ್ಷಣ ಪಡೆಯುವ ಮಗು ನಿರಂತರವಾಗಿ 30 ದಿನಗಳವರೆಗೆ ಶಾಲಾ ಪ್ರಿನ್ಸಿಪಾಲ್ ಅಥವಾ ಮುಖ್ಯೋಪಾಧ್ಯಾಯರಿಗೆ ಮಾಹಿತಿ ಇಲ್ಲದೆ ಗೈರು ಹಾಜರಾದರೆ, ಅಂತಹ ಸಂದರ್ಭದಲ್ಲಿ ಶಾಲಾ ಪ್ರಿನ್ಸಿಪಾಲ್ ಅಥವಾ ಮುಖ್ಯೋಪಾಧ್ಯಾಯರು ಗೈರು ಹಾಜರಿ ಬಗ್ಗೆ ಅಧಿನಿಯಮದ ಕಲಂ 176 ಉಪಕಲಂ (1) ರ(1)ರಲ್ಲಿ ಉಲ್ಲೇಖಿಸಲಾದ ನೋಡಲ್ ಅಧಿಕಾರಿಗೆ ವರದಿ ಮಾಡುವ ಕುರಿತು ಜಿಲ್ಲೆಯಲ್ಲಿ ಕ್ರಮ ವಹಿಸುವುದು.

**XIV) ಜಿಲ್ಲಾಧಿಕಾರಿಗಳು/ನಿರೀಕ್ಷಕರುಗಳ ಕರ್ತವ್ಯಗಳು:-**

1. ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ನಿಯಮಗಳು, 2017ರ 17 ಸಿ ರನ್ವಯ ಜಿಲ್ಲಾಧಿಕಾರಿಗಳ ಕರ್ತವ್ಯಗಳನ್ನು ಪಾಲಿಸುವುದು.
2. ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, ಕಲಂ 17ರಡಿ ನೇಮಕಗೊಂಡ ನಿರೀಕ್ಷಕರು ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ನಿಯಮಗಳು, 2017ರ 17 ಡಿ ರನ್ವಯ ಕರ್ತವ್ಯಗಳನ್ನು ನಿರ್ವಹಿಸುವುದು.

**XV) ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಆಡಳಿತಾತ್ಮಕ ನಿರ್ವಹಣೆಗಳು:-**

1. ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಕಛೇರಿಗಳನ್ನು ಆಡಳಿತಾತ್ಮಕ ದೃಷ್ಠಿಯಿಂದ ಆಯಾ ಜಿಲ್ಲೆಗಳ ಸಹಾಯಕ ಕಾರ್ಮಿಕ ಆಯುಕ್ತರು ಅಥವಾ ಕಾರ್ಮಿಕ ಅಧಿಕಾರಿಗಳ ಕಛೇರಿಗೆ ಸ್ಥಳಾಂತರಿಸುವುದು ಮತ್ತು ಈ ಅಧಿಕಾರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುವುದು.
2. ಸರ್ಕಾರದ ಆದೇಶ ಸಂಖ್ಯೆ:ಕಾಇ 52 ಸಿಎಲ್‌ಸಿ 2017, ದಿನಾಂಕ:11/02/2021ರಲ್ಲಿ ಸರ್ಕಾರವು ಆಯಾ ಜಿಲ್ಲೆಯ ಸಹಾಯಕ ಕಾರ್ಮಿಕ ಆಯುಕ್ತರು ಅಥವಾ ಕಾರ್ಮಿಕ ಅಧಿಕಾರಿಗಳನ್ನು ಡ್ರಾಯಿಂಗ್ ಆಫೀಸರ್ ಆಗಿ ನೇಮಕ ಮಾಡಲಾಗಿದ್ದು, ಎಲ್ಲಾ ಜಿಲ್ಲೆಗಳಲ್ಲಿರುವ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಎಲ್ಲಾ ರೀತಿಯ ಕಡತಗಳು ಆಯಾ ಜಿಲ್ಲೆಗಳಲ್ಲಿನ ಸಹಾಯಕ ಕಾರ್ಮಿಕ ಆಯುಕ್ತರ ಅಥವಾ ಕಾರ್ಮಿಕ ಅಧಿಕಾರಿಗಳ ಮುಖಾಂತರ ಮಂಡನೆಯಾಗುವುದು ಮತ್ತು ಪತ್ರ ವ್ಯವಹಾರ ಮಾಡುವುದು ಮತ್ತು ಎಲ್ಲಾ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳು ಸಹಾಯಕ ಕಾರ್ಮಿಕ ಆಯುಕ್ತರ ಅಥವಾ ಕಾರ್ಮಿಕ ಅಧಿಕಾರಿಗಳ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವುದು.
3. ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳಲ್ಲಿ ಎರಡು ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವುದು. ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಒಂದು ಖಾತೆ ಹಾಗೂ ಕಾರ್ಪಸ್ ನಿಧಿಗೆ ಒಂದು ಖಾತೆಯನ್ನು ನಿರ್ವಹಿಸುವುದು. ಈಗಾಗಲೇ ಹೆಚ್ಚು ಖಾತೆಗಳನ್ನು ತೆರೆದಿದ್ದಲ್ಲಿ ಅಂತಹ ಖಾತೆಗಳನ್ನು ನಿಷ್ಕ್ರಿಯಗೊಳಿಸಲು ಕ್ರಮ ಕೈಗೊಳ್ಳುವುದು.
4. ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಲೆಕ್ಕ ತಪಾಸಣೆಯನ್ನು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಇವರಿಂದ ತಪಾಸಣೆ ನಡೆಸಿ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
5. ಉಲ್ಲೇಖ(3)ರನ್ವಯ ಎಲ್ಲಾ ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳಲ್ಲಿನ ಸಿಬ್ಬಂದಿಗಳು ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

6. ಕೇಂದ್ರ ಕಛೇರಿಯಿಂದ ಬಿಡುಗಡೆಯಾಗುವ ಅನುದಾನವನ್ನು ಲೆಕ್ಕಶೀರ್ಷಿಕೆವಾರು ವಿನೀಯೋಗಿಸುವುದು ಹಾಗೂ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು ಮತ್ತು ಕೇಂದ್ರ ಕಛೇರಿಯಿಂದ ಬಿಡುಗಡೆಯಾಗುವ ಅನುದಾನವನ್ನು ಬೇರೆ ಲೆಕ್ಕಶೀರ್ಷಿಕೆಯಡಿ ಬಳಕೆ ಮಾಡಿಕೊಳ್ಳಲು ಕೇಂದ್ರ ಕಛೇರಿಯ ಅನುಮತಿಯನ್ನು ಪಡೆಯುವುದು.
7. ಕೇಂದ್ರ ಕಛೇರಿಗೆ ಸಲ್ಲಿಸಬೇಕಾದ ವರದಿಗಳನ್ನು ಮಾಸಿಕ, ತ್ರೈಮಾಸಿಕ, ಎಸ್.ಸಿ.ಎಸ್.ಪಿ, ಟಿ.ಎಸ್.ಪಿ, ವಾರ್ಷಿಕ ವರದಿ, ಬ್ಯಾಂಕ್ ಮ್ಯಾಂಡೇಟ್ ಫಾರಂ ಹಾಗೂ ಇತರೆ ವರದಿಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.
8. ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯನ್ನು ಪ್ರತಿ ವರ್ಷ ನವೀಕರಿಸಲು ಕ್ರಮವಹಿಸುವುದು.
9. ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣೆಗಾಗಿ NCPCR KCPCR ಹಾಗೂ ಜಿಲ್ಲಾಧಿಕಾರಿಗಳು ನೀಡುವ ನಿರ್ದೇಶನವನ್ನು ಕಡ್ಡಾಯವಾಗಿ ಪಾಲನೆ ಮಾಡುವುದು.
10. ಮೇಲ್ಕಂಡಂತೆ ಉಪ ಕಾರ್ಮಿಕ ಆಯುಕ್ತರು ತಮ್ಮ ಪ್ರಾದೇಶಿಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಮೇಲ್ಕಂಡ ಅಂಶಗಳ ಕುರಿತು ಪರಿಶೀಲಿಸಿ, ಪ್ರತಿ ತಿಂಗಳು ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ 03 ತಿಂಗಳಿಗೊಮ್ಮೆ ತಮ್ಮ ಪ್ರಾದೇಶಿಕ ವ್ಯಾಪ್ತಿಗೆ ಬರುವ ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ವರದಿಯನ್ನು ಹಾಗೂ ಸಭೆಯ ನಡವಳಿಯನ್ನು ಕೇಂದ್ರ ಕಛೇರಿಗೆ ಕಳುಹಿಸಲು ಈ ಮೂಲಕ ಸೂಚಿಸಿದೆ.

**XVI) ಈ ಕುರಿತು ಕಾಲ ಕಾಲಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಕಾರ್ಮಿಕ ಆಯುಕ್ತರು ನೀಡುವ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.**

Gopalk

**ಆಯುಕ್ತರು**
**ಕಾರ್ಮಿಕ ಇಲಾಖೆ**

**ಇವರಿಗೆ,**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
2. ಎಲ್ಲಾ ಉಪ ಕಾರ್ಮಿಕ ಆಯುಕ್ತರು
3. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು
4. ಎಲ್ಲಾ ಕಾರ್ಮಿಕ ಅಧಿಕಾರಿಗಳು

**ಪ್ರತಿಯನ್ನು,**

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು–560001